ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2019–20 ದಿನಾಂಕ : 03–09–2019

# ಪತ್ರಿಕಾ ಆಮಂತ್ರಣ

**1.** ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆಯ ರಾಜ್ಯ ಸಚಿವ ಶ್ರೀ ರಾಮದಾಸ್ ಅಥಾವಲೆ ಅವರು ತಮ್ಮ ಇಲಾಖೆಗೆ ಸಂಬಂಧಿಸಿದ ವಿವಧ ಯೋಜನೆಗಳ ಕುರಿತು ರಾಜ್ಯ ಸರ್ಕಾರದ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ದಿನಾಂಕ : 04–09–2019 ಸಮಯ : ಮಧ್ಯಾಹ್ನ 2–00 ಗಂಟೆಗೆ ಅಧಕಾರಿಗಳೊಂದಿಗೆ ಸಭೆ
ಸಂಜೆ 4–00 ಗಂಟೆಗೆ ಪತ್ರಿಕಾಗೋಷ್ಠಿ
ಸ್ಥಳ : ಕುಮಾರಕೃಪ ಅತಿಥಿಗೃಹ, ಕುಮಾರಕೃಪ ರಸ್ತೆ, ಬೆಂಗಳೂರು

**2. Press Conference:**

**4th General Assembly of Association of Election Bodies (A-WEB) and International Conference.**

**Mr. Sunil Arora, CEC ECI and Chair AWEB :**

**Mr. Glen Vuma Mashinini, Vice Chairperson A-WEB and EC of South Africa and Mr. Jonghyun Choe, Secretary General of A-WEB from Republic Korea**

**Date: 04-09-2019 Wednesday Time : 2-00 p.m.**

**Venue : The West End Court, Hotel Taj Westend, Bengaluru**

**3.** ಅಬಕಾರಿ ಸಚಿವ ಹೆಚ್. ನಾಗೇಶ್ ಅವರ ಪತ್ರಿಕಾಗೋಷ್ಠಿ :

ದಿನಾಂಕ : 04-9-2019 ಬುಧವಾರ ಸಮಯ : ಸಂಜೆ 4-00 ಗಂಟೆಗೆ

ಸ್ಥಳ : ಕೊಠಡಿ ಸಂಖ್ಯೆ : 318, ಮೂರನೇ ಮಹಡಿ, ವಿಕಾಸ ಸೌಧ, ಬೆಂಗಳೂರು

## ಪತ್ರಿಕಾ ಪ್ರಕಟಣೆ

## ವಸತಿ ಸಚಿವರ ಪ್ರವಾಸ

ಬೆಂಗಳೂರು, ಸೆಪ್ಟೆಂಬರ್ 3 (ಕರ್ನಾಟಕ ವಾರ್ತೆ)

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರೂ ಆದ ವಸತಿ ಸಚಿವ ವಿ. ಸೋಮಣ್ಣ ಅವರು ಸೆಪ್ಟೆಂಬರ್ 4 ಮತ್ತು 5 ರಂದು ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ.

ಸಚಿವರು ಸೆಪ್ಟೆಂಬರ್ 4 ರಂದು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮೈಸೂರು ಗ್ರಾಮಾಂತರ ದಸರಾ ಕುರಿತಂತೆ ತಾಲ್ಲೂಕು ಮಟ್ಟದ ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳೊಂದಿಗೆ ಹಾಗೂ ಮನೆಮನೆಗೆ ದಸರಾ ಕುರಿತಂತೆ ಮೈಸೂರು ಮಹಾನಗರಪಾಲಿಕೆಯ ಎಲ್ಲಾ ವಾರ್ಡ್‌ಗಳ ಪುರಪಿತೃಗಳು ಮತ್ತು ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ. ಅದೇ ದಿನ ಸಂಜೆ ಮೈಸೂರು ನಗರದ ಸಂಸದರೂ, ಶಾಸಕರೂ ಹಾಗೂ ವಿವಿಧ ಪಕ್ಷಗಳ ಮುಖಂಡರೊಡನೆ ಮಾತುಕತೆ ನಡೆಸಲಿದ್ದಾರೆ. ಮರುದಿನ ಸೆಪ್ಟೆಂಬರ್ 5 ರಂದು ದಸರಾ ಸಿದ್ಧತೆಗೆ ಸಂಬಂಧಿಸಿದಂತೆ ವಿವಿಧ ಸಮಿತಿಗಳ ಪದಾಧಿಕಾರಿಗಳು ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ. ಕಲಾ ಮಂದಿರದಲ್ಲಿ ಆಯೋಜಿಸಿರುವ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ಹಾಗೂ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಆಯೋಜಿಸಿರುವ ದಸರಾ ಸಹಾಯವಾಣಿ ಉದ್ಘಾಟನೆ ಕಾರ್ಯಕ್ರಮದಡಿ ಪಾಲ್ಗೊಂಡು ಸಂಜೆ ಬೆಂಗಳೂರಿಗೆ ವಾಪಸ್ಸಾಗಲಿದ್ದಾರೆ.

### ಡಿ. ಫಾರ್ಮ, ಬಿ. ಫಾರ್ಮ ಹಾಗೂ ಎಂ. ಫಾರ್ಮಕ್ಕೆ ಸೆಪ್ಟೆಂಬರ್ 6 ರಂದು ನೇರ ಪ್ರವೇಶ

ಸೆಪ್ಟೆಂಬರ್ 3 (ಕರ್ನಾಟಕ ವಾರ್ತೆ)

ನಗರದ ಪಿ. ಕಾಳಿಂಗರಾವ್ ರಸ್ತೆಯ ಸುಬ್ಬಯ್ಯ ವೃತ್ತದಲ್ಲಿರುವ ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯದಲ್ಲಿ 2019-20 ನೇ ಶೈಕ್ಷಣಿಕ ಸಾಲಿಗೆ ಸಾಮಾನ್ಯ ಪ್ರವೇಶ ಪರೀಕ್ಷೆ ( ಸಿ.ಇ.ಟಿ. ) ಮತ್ತು ಸ್ನಾತಕೋತ್ತರ ಸಾಮಾನ್ಯ ಪ್ರವೇಶ ಪರೀಕ್ಷೆ (ಪಿ.ಜಿ.ಇ.ಟಿ ). ಕೌನ್ಸಿಲಿಂಗ್ ನಂತರ ಬಾಕಿ ಉಳಿದ ಹಾಗೂ

ಉಳಿಕೆಯಾದ್ದಲ್ಲಿ ಪ್ರಥಮ ವರ್ಷದ ಡಿ. ಫಾರ್ಮ, ಬಿ. ಫಾರ್ಮ (ಲ್ಯಾಟರಲ್ ಎಂಟ್ರಿ) ಹಾಗೂ ಎಂ. ಫಾರ್ಮ ಕೋರ್ಸಿನ ಸೀಟುಗಳಿಗೆ ಅರ್ಹ ಅಭ್ಯರ್ಥಿಗಳಿಂದ ಪ್ರವೇಶ ಮಾಡಿಕೊಳ್ಳಲಾಗುವುದು.

ಪ್ರವೇಶ ಬಯಸುವ ಅರ್ಹ ಅಭ್ಯರ್ಥಿಗಳು ಸೆಪ್ಟೆಂಬರ್ 6 ರಂದು ಬೆಳಿಗ್ಗೆ 11–30 ರೊಳಗಾಗಿ ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯದಲ್ಲಿ ನೋಂದಣಿ ಮಾಡಿಕೊಳ್ಳಬಹುದು. ಆಯ್ಕೆಯಾದ ಅಭ್ಯರ್ಥಿಗಳು ಅದೇ ದಿನ ಸಂಜೆ 5.00 ಗಂಟೆಯೊಳಗೆ ಪ್ರವೇಶ ಪಡೆಯಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಎಸಿಬಿ ದಾಳಿ

ಬೆಂಗಳೂರು, ಸೆಪ್ಟೆಂಬರ್ 3 (ಕರ್ನಾಟಕ ವಾರ್ತೆ)

ದಿನಾಂಕ:31.07.2019 ರಂದು ಭ್ರಷ್ಟಾಚಾರ ನಿಗ್ರಹ ದಳದ ಬೆಂಗಳೂರು ನಗರ ಠಾಣೆಯ ವಿವಿಧ ತಂಡಗಳಿಂದ ಕೆಲವು ಸರ್ಕಾರಿ ಅಧಿಕಾರಿಗಳು ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಖಾಸಗಿ ವ್ಯಕ್ತಿಗಳೊಂದಿಗೆ ಶಾಮೀಲಾಗಿ ಬಿಬಿಎಂಪಿ ರಸ್ತೆ ಅಗಲೀಕರಣಕ್ಕೆ ವಶಪಡಿಸಿಕೊಳ್ಳಲಾದ ಸೈಟುಗಳು ಮತ್ತು ಬಿಲ್ಡಿಂಗ್‌ಗಳ ಜಾಗಕ್ಕಿಂತ ಹೆಚ್ಚು ಜಾಗಕ್ಕೆ ಬೆಲೆ ನಿಗಧೀಕರಣ ಮಾಡಿಸಿಕೊಂಡು ಆ ಮೂಲಕ ಖಾಸಗಿ ವ್ಯಕ್ತಿಗಳಿಗೆ ಅಪಾರ ಪ್ರಮಾಣದ ಅಕ್ರಮ ಲಾಭ ಮಾಡಿಕೊಟ್ಟು ಬಿಬಿಎಂಪಿಗೆ ಮತ್ತು ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟವುಂಟು ಮಾಡಿರುವುದರಿಂದ, ಬಿಬಿಎಂಪಿ ಆಯುಕ್ತರಿಂದ ತನಿಖೆ ಕೈಗೊಳ್ಳಲು ಪೂರ್ವಾನುಮತಿ ಪಡೆದು ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಸದರಿ ಪ್ರಕರಣದಲ್ಲಿ ಹೊರಮಾವಿನ ಟಿಸಿ ಪಾಳ್ಯ ಮುಖ್ಯ ರಸ್ತೆ ಹಾಗೂ ವಾರಣಾಸಿ ರಸ್ತೆ ಅಗಲೀಕರಣಕ್ಕೆ ಸರ್ವೆ ನಂ.7ಕ್ಕೆ ಸಂಬಂಧಿಸಿದ ಜಮೀನಿನಲ್ಲಿ ಅಂದಾಜು 6,886 ಚ.ಅಡಿ ಜಾಗ ಸ್ವಾಧೀನಪಡಿಸಿಕೊಂಡಿದ್ದು ಸ್ವಾಧೀನ ಪ್ರಕ್ರಿಯೇ ಪೂರ್ಣಗೊಳಸದೇ, ಅಕ್ರಮವಾಗಿ ಅಂದಾಜು 1,57,961 ಚ.ಅಡಿ ಬೋಗಸ್ ಟಿ.ಡಿ.ಆರ್ ಅನ್ನು ಸೃಷ್ಟಿಸಿ ಅನ್ಯ ವ್ಯಕ್ತಿಗಳಿಗೆ ಅಕ್ರಮವಾಗಿ ದುಬಾರಿ ಬೆಲೆಗೆ ಮಾರಾಟ ಮಾಡಿರುತ್ತಾರೆ.

ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ನಗರ ಠಾಣೆಯ ವಿವಿಧ ತಂಡಗಳಿಂದ ಆಪಾದಿತ ಸರ್ಕಾರಿ ನೌಕರರ ಮತ್ತು ಖಾಸಗಿ ವ್ಯಕ್ತಿಗಳಿಗೆ ಸಂಬಂಧಿಸಿದ 09 ಸ್ಥಳಗಳ ಮೇಲೆ ಶೋಧನೆ ವಾರೆಂಟ್ ಪಡೆದು ಶೋಧನೆ ನಡೆಸಲಾಗಿರುತ್ತದೆ. ಶೋಧನಾ ಕಾರ್ಯವು ಮುಂದುವರೆದಿದ್ದು ಈವರೆಗೆ ಶೋಧನೆ ನಡಸಲಾದ ಜಾಗಗಳ ಮಾಹಿತಿ ಈ ಕೆಳಕಂಡಂತಿರುತ್ತವೆ.

1. ಶ್ರೀ.ನಾಗರಾಜು, ಕಾರ್ಯಪಾಲಕ ಅಭಿಯಂತರರು, ಬಿಬಿಎಂಪಿ ಚೋಳರ ಪಾಳ್ಯ, ಬೆಂಗಳೂರು ನಲ್ಲಿನ ವಾಸದ ಮನೆ.
2. ಶ್ರೀಮತಿ ಎಸ್ ನಂದನ, ಎ.ಆರ್.ಓ, ಬಿಬಿಎಂಪಿ ರವರ ಬಿ.ಟಿ.ಎಂ.ಲೇಔಟ್‌ನಲ್ಲಿನ ವಾಸದ ಮನೆ ಮತ್ತು ಈ ಹಿಂದೆ ಕರ್ತವ್ಯ ನಿರ್ವಹಿಸುತ್ತಿದ್ದ ಸಹಾಯಕ ಕಂದಾಯ ಅಧಿಕಾಗಳ ಕಛೇರಿ, ಹೊರಮಾವು ಉಪವಲಯ, ಬಿಬಿಎಂಪಿ ಬೆಂಗಳೂರು.
3. ಶ್ರೀ ಎಂ.ಕೆ.ರೋಚನ್ ರವರ ಹೆಚ್.ಆರ್.ಬಿ.ಆರ್ ಲೇಔಟ್, ಕಲ್ಯಾಣನಗರದಲ್ಲಿನ ವಾಸದ ಮನೆ.

4. ಗುಡ್ ಹೋಂ ವೆಂಚರ್ಸ್, ಕಲ್ಕೆರೆ ಮುಖ್ಯ ರಸ್ತೆ, ಹೊರಮಾವು ಬೆಂಗಳೂರು ನಲ್ಲಿನ ಕಛೇರಿ.
5. ಶ್ರೀ ವಿ,ಗಜೇಂದ್ರ ರವರ ಹೊರಮಾವು ಬೆಂಗಳೂರು ನಲ್ಲಿನ ವಾಸದ ಮನೆ.
6. ಜಿ.ವಿ.ಕನ್‌ಸ್ಟ್ರಕ್ಷನ್ ಕಲ್ಕೆರೆ ಮುಖ್ಯ ರಸ್ತೆ, ಬೆಂಗಳೂರು ನಗರದಲ್ಲಿನ ಕಛೇರಿ.
7. ಶ್ರೀ ಗೋಪಿ, ಸರ್ಜಾಪುರ ಮುಖ್ಯರಸ್ತೆ, ಬೆಂಗಳೂರು ನಗರದಲ್ಲಿನ ವಾಸದ ಮನೆ.
8. ಶ್ರೀಮತಿ ಆನೆಮ್ಮ, ಅಕ್ಷಯ ನಗರ ಕೌದೇನಹಳ್ಳಿ, ರಾಮಮೂರ್ತಿನಗರ ಬೆಂಗಳೂರು ನಲ್ಲಿನ ವಾಸದ ಮನೆ.

ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ನಗರ ಠಾಣೆಯ ವಿವಿಧ ತಂಡಗಳಿಂದ ಮೇಲ್ಕಂಡ ಸ್ಥಳಗಳಲ್ಲಿ ಶೋಧನಾ ಕಾರ್ಯ ನಡೆಸಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ವಶಪಡಿಸಿಕೊಳ್ಳಲಾಗಿದೆ. ಪ್ರಕರಣದ ತನಿಖೆ ಮುಂದುವರೆದಿದೆ ಎಂದು ಪ್ರಕಟಣೆ ತಿಳಿಸಿದೆ.

Photo Caption:

Chief Election Commissioner Sunil Arora, Election Commissioners Ashok Lavasa and Sushil Chandra alongwith outgoing Chairman of the Association of World Election Bodies (A-WEB) from Romania Mr Ion Mincu Radulescu lighting the lamp to mark the inauguration of the 4th General Assembly Meeting of A-WEB in Bengaluru on September 3.

Sunil Arora assumed as Chairman of Association of World Election Bodies for the term 2019-21. As many as 120 delegates from 50 countries are attending the meeting.